ಪ್ರಸ್ತಾವ ಬಿದ್ದುಹೋಯಿತು ಮತ್ತು ತಿದ್ದುಪಡಿ ಪ್ರಸ್ತಾವ ತಿರಸ್ಕರಿಸಲ್ಪಟ್ಟಿತು.

ಶ್ರೀ ಬಿ. ಸೋಮಶೇಖರ್ : ಆಡಳಿತ ಪಕ್ಷದವರು ತೆಗೆದುಕೊಂಡಂತಹ ನಿಲುವು ಇವತ್ತು ಸಾರ್ವಜನಿಕರ ಹಿತಕ್ಕೆ ಧಕ್ಕೆ ಆಗಿದೆ. ಸಮಾಜವನ್ನು ಹಾಳು ಮಾಡತಕ್ಕಂಥ ನಿಲುವನ್ನು ತೆಗೆದುಕೊಂಡಿದ್ದಾರೆ. ಅದಕ್ಕೆ ಪ್ರತಿಭಟಣೆ ಮಾಡಿ ನಾವು ಹೊರಗೆ ಹೋಗುತ್ತಿದ್ದೇವೆ.

(ಅಖಿಲ ಭಾರತ ಪ್ರಗತಿಪರ ಜನತಾದಳದವರು ಶ್ರೀ ಬಿ. ಸೋಮಶೇಖರ್ ಅವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು : ಆಗಲೇ ಹೋಗಬೇಕಾಗಿತ್ತು. ಈಗ ಓಟಿಂಗ್ ತೆಗೆದುಕೊಂಡು ಆದಮೇಲೆ ಏಕೆ ಹೋಗಬೇಕಾಗಿತ್ತು?

ಗೊಂದಲ

ಅಧ್ಯಕ್ಷರು : ಓಟಿಂಗೂ ಆಗಬೇಕು, ಪ್ರತಿಭಟನೆಯೂ ಆಗಬೇಕಾ?

ಶ್ರೀ ಎ. ಪಾಪಣ್ಣ : ಇವರು ಪ್ರಜಾಪ್ರಭುತ್ವವನ್ನು ಕೊಲೆ ಮಾಡುತ್ತಿದ್ದಾರೆ.

ಗೊಂದಲ

ಶ್ರೀ ಆರಗ ಜ್ಞಾನೇಂದ್ರ : ಸರ್ಕಾರದಲ್ಲಿ ನನ್ನ ಒಂದು ವಿನಂತಿ. ದಯವಿಟ್ಟು ನಿಮ್ಹಾನ್ಸ್ ಆಸ್ಪತ್ರೆಯ ಬ್ರಾಂಚ್ ಗಳನ್ನು ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ತೆರೆಯಬೇಕು. ಈ ಲಾಟರಿಯಿಂದ ಬಹಳ ಜನ ಹುಚ್ಚರಾಗುತ್ತಿದ್ದಾರೆ. ಹುಚ್ಚಾಸ್ಪತ್ರೆಯನ್ನು ಬಲಗೊಳಿಸುವುದಕ್ಕೋಸ್ಕರ ಈ ಲಾಟರಿ ಹಣವನ್ನು ವಿನಿಯೋಗ ಮಾಡಲಿ ಎಂದು ಹೇಳುತ್ತೇನೆ.

ಅಧ್ಯಕ್ಷರು : ಶ್ರೀ ಎಸ್.ಎಂ. ಕೃಷ್ಣ, ಮಾನ್ಯ ಮುಖ್ಯಮಂತ್ರಿಯವರು....

ಶ್ರೀ ಜಗದೀಶ್ ಶೆಟ್ಟರ್ : ಜೀರೋ ಅವರ್ ಯಾವಾಗ ತೆಗೆದುಕೊಳ್ಳುತ್ತೀರಿ?

ಅಧ್ಯಕ್ಷರು : ಬರೇ ಇಂಟ್ರಡಕ್ಷನ್ ಅಷ್ಟೇ.

ಶ್ರೀ ಪಿ.ಜಿ.ಆರ್. ಸಿಂಧ್ಯ : ವಿತ್ತೀಯ ಕಾರ್ಯಕಲಾಪಗಳು ಪ್ರಾರಂಭ ಆಗುವ ಮುಂಚೆ ಬೇರೆ ವಿಚಾರ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಜೀರೋ ಅವರ್ ವಿಚಾರ ಇದೆಯಲ್ಲಾ.

ಅಧ್ಯಕ್ಷರು : ಈಗ ಬರೇ ಇಂಟ್ರಡಕ್ಷನ್. ಆಮೇಲೆ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಶೂನ್ಯ ವೇಳೆ ಮುಗಿದು ಹೋಗುತ್ತದೆ. ಶೂನ್ಯ ವೇಳೆ ಮುಗಿದ ಮೇಲೆ ವಿತ್ತೀಯ ಕಾರ್ಯಕಲಾಪಗಳು ಅಂದರೆ ಹೇಗೆ?

ಅಧ್ಯಕ್ಷರು : ಇದು ಒಂದೇ ನಿಮಿಷದ ಇಂಟ್ರಡಕ್ಷನ್ ಅಷ್ಟೇ.

4. ವಿತ್ತೀಯ ಕಾರ್ಯಕಲಾಪಗಳು

2003–2004ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು)ನ್ನು ಮಂಡಿಸುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಕೋರಿ 2003–2004 ನೇ ಸಾಲಿನ ಪೂರಕ ಅಂದಾಜುಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಪೂರಕ ಅಂದಾಜುಗಳು 2003-2004 (ಮೊದಲನೆ ಕಂತು)

ಪ್ರಾರಂಭಿಕ ಟಿಪ್ಪಣಿ

ವಿನಿಯೋಗ ಅಧಿನಿಯಮವು ನೀಡಿದ ಅಧಿಕಾರದ ಮೇರೆಗೆ ಪ್ರಸಕ್ತ ವರ್ಷಕ್ಕಾಗಿ ಒಂದು ವಿಶಿಷ್ಟ ಸೇವೆಗೆ ವೆಚ್ಚ ಮಾಡತಕ್ಕ ಮೊಬಲಗು ಆ ವರ್ಷದ ಉದ್ದೇಶಕ್ಕಾಗಿ ಸಾಕಾಗದಿದ್ದರೆ ಅಥವಾ ಆ ವರ್ಷದ ವಾರ್ಷಿಕ ನಿರೂಪಣೆಯಲ್ಲಿ ಹೇಳಿರದ ಹೊಸಸೇವೆಗಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪೂರಕ ಅಥವಾ ಹೆಚ್ಚಿನ ವೆಚ್ಚದ ಅವಶ್ಯಕತೆಯುಂಟಾಗಿದ್ದರೆ ಅಂದಾಜು ಮಾಡಿದ ವೆಚ್ಚದ ಮೊಬಲಗನ್ನು ತೋರಿಸುವ ಮತ್ತೊಂದು ವಿವರಣೆಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲು ಸಂವಿಧಾನದ 205(1)ನೆಯ ಅನುಚ್ಛೇದವು ಅವಕಾಶ ಕಲ್ಪಿಸಿದೆ.

2. ಸಂವಿಧಾನ ಸದರಿ ಉಪಬಂಧಕ್ಕನುಸಾರವಾಗಿ 81647.09 ಲಕ್ಷ ರೂಪಾಯಿಯ ಒಟ್ಟು ಮೊತ್ತದಷ್ಟು ಪೂರಕ ಅಂದಾಜುಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲಾಗಿದೆ. ಈ ಅಂದಾಜುಗಳು ಈ ಕೆಳಗಿನ ವಿಷಯಗಳಿಗೆ ಸಂಬಂಧಿಸಿವೆ.

ಅ) ವಿಧಾನ ಮಂಡಲದ ಮುಂದೆ 2003 ಮಾರ್ಚ್ ತಿಂಗಳಲ್ಲಿ ಮಂಡಿಸಲಾದ 2003-2004ನೇಯ ಸಾಲಿನ ಆಯವ್ಯಯ ಅಂದಾಜುಗಳ ತರುವಾಯ ಸಾದಿಲ್ವಾರು ನಿಧಿಯಿಂದ ಮಂಜೂರಾದ ಮುಂಗಡಗಳು

ಆ) ಬೇಡಿಕೆಗಳಲ್ಲಿ ತೋರಿಸಿರುವ ಉದ್ದೇಶಗಳಿಗಾಗಿ ವರ್ಷದಲ್ಲಿ ಅಗತ್ಯವಿರುವ ಹೆಚ್ಚಿನ ಪೂರಕ ಅನುದಾನಗಳು ಮತ್ತು

ಇ) ಲೆಕ್ಕ ಹೊಂದಾಣಿಕೆ ವಿಷಯಗಳು

3. ಸಾದಿಲ್ವಾರು ನಿಧಿಯಿಂದ ಮಂಜೂರಾದ ಮತ್ತು ಅದನ್ನು ಭರಿಸಲು ಪೂರಕ ಅಂದಾಜುಗಳಲ್ಲಿ ಸೇರಿಸಲಾದ ಮುಂಗಡವನ್ನು ತೋರಿಸುವ ವಿವರಣೆಯನ್ನು ಅನುಬಂಧದಲ್ಲಿ ತೋರಿಸಲಾಗಿದೆ.

4. ಪೂರಕ ಅಂದಾಜುಗಳಲ್ಲಿ ಒದಗಿಸಿರುವ ರೂ. 81647.09 ಲಕ್ಷಗಳಲ್ಲಿ ರೂ. 12665.00 ಲಕ್ಷಗಳು ಕೇಂದ್ರ ಸಹಾಯಕ್ಕೆ ಸಂಬಂಧಿಸಿದೆ, ರೂ. 4566.84 ಲಕ್ಷಗಳು ಜಮೆಗಳಿಗೆ ಮತ್ತು ರೂ. 38671.85 ಲಕ್ಷಗಳು ಲೆಕ್ಕ ಹೊಂದಾಣಿಕೆಗೆ ಸಂಬಂಧಿಸಿದೆ. ಸಾಮಾನ್ಯ ರಾಜಸ್ವದಿಂದ ಹೊರಹೋಗುವ ನಿವ್ವಳ ಮೊತ್ತ 25743.40 ಲಕ್ಷ ರೂಪಾಯಿ ಮಾತ್ರವಾಗಿದೆ. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002 ರನ್ವಯ, ನಿವ್ವಳ ಹಣ ಹೊರಹೋಗುವಿಕೆಯಿಂದಾಗುವ ಆರ್ಥಿಕ ಪರಿಣಾಮವನ್ನು ವೆಚ್ಚದ ಸಂವಾದಿ ಕಡಿತ ಮತ್ತು ರಾಜಸ್ವ ಹೆಚ್ಚಳದಿಂದ ಸರಿದೂಗಿಸಲಾಗಿದೆ.

2003-2004ನೇ ಸಾಲಿನ ಪೂರಕ ಅಂದಾಜುಗಳು (ಮೊದಲನೆ ಕಂತು)

ಅಭಿಯಾಚನೆ ಕ್ರಮಾಂಕ	ಸೇವೆಗಳು ಮತ್ತು ಉದ್ದೇಶಗಳು	ಪ್ರಭೃತ	ಮೊಬಲಗು (ಲಕ್ಷ ರೂ.ಗಳಲ್ಲಿ) ಪುರಸ್ಕೃತ	ಒಟ್ಟು
02	ಪಶುಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	111.70	111.70
03	ಆರ್ಥಿಕ	ರಾಜಸ್ವ	2202.50	2202.50
		ಬಂಡವಾಳ	1800.00	1800.00
05	ಒಳಾಡಳಿತ ಮತ್ತು ಸಾರಿಗೆ	ಬಂಡವಾಳ	2000.00	2000.00
06	ಮೂಲಭೂತ ಸೌಕರ್ಯ	ರಾಜಸ್ವ	45.00	45.00
		ಬಂಡವಾಳ	200.00	200.00
07	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್	ರಾಜಸ್ವ	228.76	228.76
08	ಅರಣ್ಯ, ಜೀವಿ ಶಾಸ್ತ್ರ ಮತ್ತು ಪರಿಸರ	ರಾಜಸ್ವ	633.42	633.42
09	ಸಹಕಾರ	ರಾಜಸ್ವ	8200.00	8200.00
10	ಸಮಾಜ ಕಲ್ಯಾಣ	ರಾಜಸ್ವ	847.92	847.92
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	176.39	176.39
		ಬಂಡವಾಳ	353.23	353.23
13	ಆಹಾರ ಮತ್ತು ನಾಗರೀಕ ಸರಬರಾಜು	ಬಂಡವಾಳ	139.02	139.02
14	ಕಂದಾಯ	ರಾಜಸ್ವ	1847.77	1847.77
18	ವಾಣಿಜ್ಯ ಮತ್ತು ಕೈಗಾರಿಕಾ	ರಾಜಸ್ವ	602.03	602.03
		ಬಂಡವಾಳ	956.97	956.97
19	ನಗರಾಭಿವೃದ್ಧಿ	ರಾಜಸ್ವ	4229.00	4229.00
		ಬಂಡವಾಳ	3527.00	3527.00
20	ಲೋಕೋಪಯೋಗಿ	ರಾಜಸ್ವ	3475.35	3475.35
		ಬಂಡವಾಳ	1523.85	1523.85
21	ಜಲ ಸಂಪನ್ಮೂಲ	ಬಂಡವಾಳ	2846.88	2846.88
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	3107.30	3107.30
24	ಇಂಧನ	ರಾಜಸ್ವ	39683.00	39683.00
		ಬಂಡವಾಳ	2885.00	2885.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	25.00	25.00
	ಒಟ್ಟು	ರಾಜಸ್ವ	65415.14	65415.14
		ಬಂಡವಾಳ	16231.95	16231.95
	ಒಟ್ಟು		81647.09	81647.09

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಈಗ ಶೂನ್ಯ ವೇಳೆ ನಮಗೆ ಹೆಚ್ಚು ಸಮಯ ಇಲ್ಲದಿರುವುದರಿಂದ ಶೂನ್ಯ ವೇಳೆಯಲ್ಲಿ ಸುಮಾರು 20–25 ವಿಷಯಗಳನ್ನು ಪ್ರಸ್ತಾಪಿಸಬೇಕಿರುವುದರಿಂದ ಒಂದೊಂದು ಪಕ್ಷಕ್ಕೆ ಒಂದೊಂದು ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಡುತ್ತೇನೆ.

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ವಿಷಯ: ಅ) ಅಣ್ಣಿಗೇರಿ–ಬಸಾಪುರ ಗ್ರಾಮದವರ ನಡುವೆ ಘರ್ಷಣೆ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವುದು.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಸಭಾಧ್ಯಕ್ಷರೆ, ಇದು ಆಗಸ್ಟ್ ತಿಂಗಳಾಗಿದ್ದು, ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಮೂರನೆಯ ವರ್ಷವೂ ಮುಂದುವರೆಯುತ್ತಿದೆ. ರೈತರ ಆತ್ಮಹತ್ಯೆ ಪ್ರಕರಣಗಳು ದಿನನಿತ್ಯ ಹೆಚಾಗುತ್ತಿದೆ. ನಿನ್ನೆಯ ಪತ್ರಿಕೆಗಳಲ್ಲಿ ಮೂರು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು ವರದಿಯಾಗಿದ್ದರೆ, ಇವೊತ್ತು ಬೆಳಗಿನ ಪತ್ರಿಕೆಯಲ್ಲಿ ಹಾಸನ ಭಾಗದಲ್ಲಿ ಮತ್ತೆ ಮೂರು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನೋಡುತ್ತಿದ್ದೇವೆ. ಇದರೊಂದಿಗೆ ನೀರಿಗಾಗಿ ಕದನ ಚಾಲೂ ಆಗಿದೆ. ಇದನ್ನು ನಾವು civil war ಎಂದು ಕರೆಯುತ್ತೇವೆ! ಒಂದೊಂದು ಗ್ರಾಮದ ನಡುವೆ ಕುಡಿಯುವ ನೀರಿಗಾಗಿ ಜನರ ನಡುವೆ ಪರಸ್ಪರ civil war ಪ್ರಾರರಂಭವಾಗಿದ್ದು, ಇದರ ಮೊದಲ ಹಂತವನ್ನು ನವಲಗುಂದ ತಾಲ್ಲೂಕಿನಲ್ಲಿ ನೋಡುತ್ತಿದ್ದೇವೆ. ಅಣ್ಣಿಗೇರಿ–ಬಿಜಾಪುರ ಗ್ರಾಮಗಳ ಜನರ ಮಧ್ಯೆ ಕುಡಿಯುವ ನೀರಿನ ಹಂಚಿಕೆ ಸಲುವಾಗಿ ಇವೊತ್ತು ಸಂಘರ್ಷ, ಹೊಡೆದಾಟ, ಬಡಿದಾಟಗಳಾಗುತ್ತಿರುವುದನ್ನು ನೋಡುತ್ತಿದ್ದೇವೆ. ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಗದ್ದಿಯವರ ಮತಕ್ಷೇತ್ರವಾದ ನವಲಗುಂದದಲ್ಲಿ ಬಹುಶಃ ಅವರೇನಾದರೂ ಸರಿಯಾಗಿ ಮನಸ್ಸು ಮಾಡಿದ್ದರೆ ಉದ್ಭವವಾಗಿದ್ದ ಸಮಸ್ಯೆಯನ್ನು ಬಗೆಹರಿಸಬಹುದಿತ್ತು. ಆದರೆ, ಪ್ರಕರಣವನ್ನು ಅವರು ಸರಿಯಾಗಿ handle ಮಾಡಲಿಲ್ಲ. ಅಣ್ಣಿಗೇರಿಗೆ ಕುಡಿಯುವ ನೀರು ಪೂರೈಕೆ ಮಾಡುವ ಪೈಪ್ ಲೈನ್ ಏನಿದೆ, ಅದು ಬಸಾಪುರ ಗ್ರಾಮದ ಮೂಲಕ ಹೋಗುತ್ತದೆ. ಕುಡಿಯುವ ನೀರಿಗಾಗಿ ಬಸಾಪುರ ಗ್ರಾಮದ ಬೇಡಿಕೆ ಮೊದಲಿನಿಂದಲೂ ಇತ್ತು ಇದಕ್ಕಾಗಿ ಕಳೆದ ಮೂರು ವರ್ಷಗಳಿಂದ ಅವರು ಹೋರಾಟ ಮಾಡುತ್ತಿದ್ದಾರೆ. ಈ ಬಗ್ಗೆ ಅಲ್ಲಿನ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೂ ತಿಳಿಸಿದ್ದರೂ ಅವರ್ಯಾರೂ ಕೂಡ ಈ ಬಗ್ಗೆ ಲಕ್ಷ್ಯ ಕೊಡಲಿಲ್ಲ. ಮೊನ್ನೆ ಆಗಸ್ಟ್ ಒಂದನೇ ತಾರೀಖಿನಂದು ಬಸಾಪುರ ಗ್ರಾಮದಲ್ಲಿ ಕುಡಿಯುವ ನೀರಿನ ಪೈಪ್ ಲೈನ್ ಅನ್ನು ಒಡೆದು ಹಾಕಿದರು. ಅನಂತರ, ಅಣ್ಣಿಗೇರಿ ಗ್ರಾಮದಿಂದ ಸಾವಿರಾರು ಸಂಖ್ಯೆಯಲ್ಲಿ ಜನರು ಬಂದು ಮಧ್ಯಾಹ್ನ ಒಂದು ಗಂಟೆಯಿಂದ ಸಂಜೆ ಐದು ಗಂಟೆಯವರೆಗೆ ಬಸಾಪುರ ಗ್ರಾಮದವರ ಮೇಲೆ ದೌರ್ಜನ್ಯ ನಡೆಸಿದ್ದಾರೆ. ಇದಕ್ಕಿಂಥ ಮುಂಚಿತವಾಗಿ ಜಿಲ್ಲಾ ಉಸ್ತುವಾರಿ ಸಚಿವರು ಸ್ಥಳಕ್ಕೆ ಬಂದು ಹೋಗಿದ್ದಾರೆ. ಅವರಿಗೆ ಬಸಾಪುರ ಗ್ರಾಮದವರು ಮನವಿ ಸಲ್ಲಿಸಿದ್ದಾರೆ. ಕುಡಿಯುವ ನೀರಿನ ಪರಿಸ್ಥಿತಿ ಬಹಳ ಹದಗೆಟ್ಟಿರುವುದರಿಂದ, ಕುಡಿಯುವ ನೀರಿನ ಪೈಪ್ ಲೈನ್ ಅಣ್ಣಿಗೇರಿಗೆ ಹೋಗುತ್ತಿದ್ದು, ಅದರ ಮೂಲಕ ನಮ್ಮ ಗ್ರಾಮಕ್ಕೆ ನೀರು ಪೂರೈಸಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ. ಗದ್ದಿಯವರು ಅಣ್ಣಿಗೇರಿ ಮತ್ತು ಬಸಾಪುರ